3

ಸರ್ವ ಶಿಕ್ಷಣ ಅಭಿಯಾನ

# ಸರ್ವ ಶಿಕ್ಷಣ ಅಭಿಯಾನ - ಕರ್ನಾಟಕ

## ರಾಜ್ಯ ಯೋಜನಾ ನಿರ್ದೇಶಕರ ಕಚೇರಿ, ನೃಪತುಂಗ ರಸ್ತೆ, ಬೆಂಗಳೂರು 01

ಸಂಖ್ಯೆ: ಸ.ಶಿ.ಅ/ಒಓಎಸ್‌ಸಿ/ಚಿ.ಅಂ/03/11-12 ದಿನಾಂಕ: 18.04.11

## ಮುದ್ರಣ ಕಾರ್ಯಕ್ಕೆ ಕೊಟೇಶನ್ ಆಹ್ವಾನ

ಸರ್ವ ಶಿಕ್ಷಣ ಅಭಿಯಾನದ ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯತಂತ್ರದಡಿಯಲ್ಲಿ 11ರಿಂದ 13 ವರ್ಷ ವಯೋಮಾನದಲ್ಲಿರುವ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಸಂಬಂಧಿಸಿದಂತೆ 6 ವಿಷಯಗಳಿಗೆ ಸಂಬಂಧಿಸಿದಂತೆ ರಚಿತವಾದ ಸಾಹಿತ್ಯ – 6 ಚಿಣ್ಣರ ಅಂಗಳ ಅಭ್ಯಾಸ ಪುಸ್ತಕಗಳು ಹಾಗೂ 01 ಬೋಧಕರ ಕೈಪಿಡಿ 2011-12ನೇ ಸಾಲಿನಲ್ಲಿ ಮುದ್ರಿಸಿ, ರಾಜ್ಯದ 34 ಶೈಕ್ಷಣಿಕ ಜಿಲ್ಲೆಗಳಿಗೆ ವಿತರಿಸಲು ದರಪಟ್ಟಿಯನ್ನು ಅರ್ಹ ಮುದ್ರಣ ಸಂಸ್ಥೆಗಳಿಂದ ಈ ಮೂಲಕ ಆಹ್ವಾನಿಸಲಾಗಿದೆ.

| 1 ಚಿಣ್ಣರ ಅಂಗಳ – 3 -- ವಿಷಯಗಳಿಗೆ ಸಂಬಂಧಿಸಿದಂತೆ 06ಪಠ್ಯ ಸಹಿತ ಅಭ್ಯಾಸ ಪುಸ್ತಕಗಳು (ಕನ್ನಡ, ಆಂಗ್ಲ, ಹಿಂದಿ, ಗಣಿತ, ವಿಜ್ಞಾನ ಹಾಗೂ ಸಮಾಜ ವಿಜ್ಞಾನ) | |
|---|---|
| ಅಂದಾಜು ಪುಟಗಳ ಸಂಖ್ಯೆ<br><br>ಕಾಗದದ ಅಳತೆ | 1) ಕನ್ನಡ – 70 ಪುಟಗಳು<br>2) ಆಂಗ್ಲ – 110 ಪುಟಗಳು<br>3) ಹಿಂದಿ – 88 ಪುಟಗಳು<br>4) ಗಣಿತ – 48 ಪುಟಗಳು<br>5) ವಿಜ್ಞಾನ– 90 ಪುಟಗಳು<br>6) ಸಮಾಜ ವಿಜ್ಞಾನ– 60 ಪುಟಗಳು<br>ಹೊರಪುಟಗಳು 04 (ಪ್ರತಿ ಪುಸ್ತಕಕ್ಕೆ)<br>ಒಳಪುಟಗಳು ಹಾಗೂ ಹೊರಪುಟಗಳನ್ನು ಬಹುವರ್ಣದಲ್ಲಿ ಮುದ್ರಿಸಬೇಕು<br>21 X 29 cm |
| ಮುದ್ರಿಸಬೇಕಾದ ಪ್ರತಿಗಳು | 15000 * 6 = 90000 |
| ಒಳಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ | 80 ಜಿ.ಎಸ್.ಎಂ ಬಿಳಿ ಹಾಳೆ 'ಎ' ದರ್ಜೆ ಮಿಲ್ |
| ಹೊರಪುಟಗಳ ಮುದ್ರಣಕ್ಕೆ ಉಪಯೋಗಿಸಬೇಕಾದ ಕಾಗದ | 220 ಜಿ.ಎಸ್.ಎಂ ಆರ್ಟ್ ಬೋರ್ಡ್ |
| ಬೈಂಡಿಂಗ್ | ಪರ್‌ಫೆಕ್ಟ್ ಬೈಂಡಿಂಗ್ |
| | |
| 2 ಚಿಣ್ಣರ ಅಂಗಳ – 3 -- ಶಿಕ್ಷಕರ ಕೈಪಿಡಿ (ಕನ್ನಡ ಆಂಗ್ಲ ಹಾಗೂ ಹಿಂದಿ ಭಾಷೆಗಳು ಹಾಗೂ ಕೋರ್ ವಿಷಯಗಳಿಗೆ ಸೇರಿ ಒಂದು ಕೈಪಿಡಿ) | |
| ಅಂದಾಜು ಪುಟಗಳ ಸಂಖ್ಯೆ<br><br>ಕಾಗದದ ಅಳತೆ | 260<br>ಹೊರಪುಟಗಳು 04<br>ಹೊರಪುಟಗಳನ್ನು ಮಾತ್ರ ಬಹುವರ್ಣದಲ್ಲಿ ಮುದ್ರಿಸಬೇಕು.<br>ಒಳಪುಟಗಳನ್ನು ಕಪ್ಪು ಬಿಳುಪು ಬಣ್ಣದಲ್ಲಿ ಮುದ್ರಿಸಬೇಕು.<br>21 X 29 cm |
| ಮುದ್ರಿಸಬೇಕಾದ ಅಂದಾಜು ಪ್ರತಿಗಳು | 3,000 |

| | |
|---|---|
| ಒಳಪುಟಗಳ ಮುದ್ರಣಕ್ಕೆ ಬಳಸಬೇಕಾದ ಕಾಗದ | 70 ಜಿ.ಎಸ್.ಎಂ ಬಿಳಿ ಹಾಳೆ 'ಎ' ದರ್ಜೆ ಮಿಲ್ |
| ಹೊರಪುಟಗಳ ಮುದ್ರಣಕ್ಕೆ ಉಪಯೋಗಿಸಬೇಕಾದ ಕಾಗದ | 220 ಜಿ.ಎಸ್.ಎಂ ಆರ್ಟ್ ಬೋರ್ಡ್ |
| ಬೈಂಡಿಂಗ್ | ಪರ್‌ಫೆಕ್ಟ್ ಬೈಂಡಿಂಗ್ |

ಸದರಿ ಮುದ್ರಣಕ್ಕೆ ಮತ್ತು ಜಿಲ್ಲಾ ಕೇಂದ್ರಗಳಿಗೆ ಪೂರೈಸಲು ತಗಲುವ ಒಟ್ಟು ಮೊತ್ತವನ್ನು ಎಲ್ಲಾ ತೆರಿಗೆಗಳು ಒಳಗೊಂಡಂತೆ ಈ ಕಛೇರಿಗೆ **ದಿನಾಂಕ: 30.04.2011 ರ ಸಂಜೆ 3.00** ಗಂಟೆಯೊಳಗೆ ತಲುಪುವಂತೆ ಸಲ್ಲಿಸತಕ್ಕದ್ದು. ದರವನ್ನು ಏಳು ಪುಸ್ತಕಗಳಿಗೆ (6 ಅಭ್ಯಾಸ ಪುಸ್ತಕಗಳಿಗೆ ಹಾಗೂ 1 ಶಿಕ್ಷಕರ ಕೈಪಿಡಿಗೆ) ಪ್ರತ್ಯೇಕವಾಗಿ ಪ್ರತಿ ಪುಸ್ತಕದ ಪ್ರತಿ ಪುಟಕ್ಕೆ ಅನ್ವಯಿಸುವಂತೆ ನೀಡಬೇಕು. ದರಗಳು ಕನಿಷ್ಠ 90 ದಿನಗಳ ಅವಧಿಗೆ ಚಾಲ್ತಿಯಲ್ಲಿರಬೇಕು. ಮುದ್ರಣ ಮತ್ತು ಪೂರೈಕೆಯನ್ನು ಕಾರ್ಯಾದೇಶ ನೀಡಿದ 15 ದಿನಗಳೊಳಗೆ ಪೂರ್ಣಗೊಳಿಸಿ ಸೂಚಿತ ಸ್ಥಳಗಳಿಗೆ ಹಂಚತಕ್ಕದ್ದು, ಪ್ರತಿ ದಿನದ ವಿಳಂಬಕ್ಕೆ 0.50 % ನಂತೆ ದಂಡ ವಿಧಿಸಲಾಗುತ್ತದೆ. ದಂಡದ ದರ 10% ಮೀರಿದರೆ ಮುದ್ರಣ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗುತ್ತದೆ. ನಮೂದಿಸಿರುವ ದರವು ಮುದ್ರಣ ವೆಚ್ಚ, ಸಾಗಾಣಿಕೆ, ಡಿ.ಟಿ.ಪಿ, ಟ್ಯಾಕ್ಸ್ ಎಲ್ಲಾ ಒಳಗೊಂಡಿರಬೇಕು.

ಪ್ರತಿ ಜಿಲ್ಲೆಗೆ ಪೂರೈಸಬೇಕಾದ ಪುಸ್ತಕಗಳ ವಿವರವನ್ನು ನಂತರ ನೀಡಲಾಗುವುದು. ಚಿಣ್ಣರ ಅಂಗಳ- **೩ಕ್ಕೆ ಸಂಬಂಧಿಸಿದಂತೆ** ಅಭ್ಯಾಸ ಪುಸ್ತಕಗಳಿಗೆ ಹಾಗೂ ಶಿಕ್ಷಕರ ಕೈಪಿಡಿಗೆ ಸಂಬಂಧಿಸಿದ **ಸಾಹಿತ್ಯದ ಡಿ.ಟಿ.ಪಿಯನ್ನು ಮುದ್ರಕರು ಮಾಡಬೇಕು.** ಅಭ್ಯಾಸ ಪುಸ್ತಕದಲ್ಲಿರುವ ಬಹುವರ್ಣದ ಚಿತ್ರಗಳನ್ನು ಮಾತ್ರ ಈ ಕಛೇರಿಯಿಂದ ಸಾಫ್ಟ್ ಪ್ರತಿ ನೀಡಲಾಗುವುದು. **ಡಿ.ಟಿ.ಪಿ ಪ್ರತಿಗಳು ಈ ಕಛೇರಿಯಿಂದ 2 ರಿಂದ 3 ಬಾರಿ ಪರಿಷ್ಕರಿಸಿ, ಅಂತಿಮ ಪ್ರತಿ ಅನುಮೋದನೆಯಾದ ನಂತರವೇ ಮುದ್ರಣ ಕಾರ್ಯವನ್ನು ಪ್ರಾರಂಭಿಸಬೇಕು.** ಸಂಸ್ಥೆಗಳ ಬಿಲ್ಲುಗಳ ಸಂಗಡ ಮುದ್ರಣ ಕಾರ್ಯದ ಡಿ.ಟಿ.ಪಿ ವಿವರವನ್ನು ಸಿ.ಡಿ ರೂಪದಲ್ಲಿ ಕಛೇರಿಗೆ ಸಲ್ಲಿಸುವುದು ಕಡ್ಡಾಯ. ಮುದ್ರಣ ಕಾರ್ಯಕ್ಕೆ ಬಳಸುವ ಕಾಗದದ ಸ್ಯಾಂಪಲ್ (ಒಳಪುಟ ಹಾಗೂ ರಕ್ಷಾ ಪುಟ) ಸಂಸ್ಥೆ ಧೃಢೀಕರಿಸಿ ಕೊಟೇಷನ್ ಸಂಗಡ ಸಲ್ಲಿಸುವುದು ಕಡ್ಡಾಯ. ಪುಸ್ತಕಗಳ ಪುಟಗಳ ಸಂಖ್ಯೆ ಕಡಿಮೆ/ಹೆಚ್ಚಾದಲ್ಲಿ Pro-rata ಆಧಾರದಲ್ಲಿ ಕಡಿಮೆ/ ಹೆಚ್ಚುವರಿ ಹಣ ಈ ಕಛೇರಿಯಿಂದ ನೀಡಲಾಗುವುದು. EMD ಮೊತ್ತ ರೂ. 26,160/- ಗಳಿಗೆ ಬ್ಯಾಂಕ್ ಹುಂಡಿ ರೂಪದಲ್ಲಿ ಕೊಟೇಶನ್ ಸಂಗಡ ಸಲ್ಲಿಸುವುದು ಕಡ್ಡಾಯ. ಆಯ್ಕೆಯಾದ ಸಂಸ್ಥೆಯವರು ಕೊಟೇಶನ್ ಒಟ್ಟು ಮೌಲ್ಯದ ಶೇಕಡ 5 ರಂತೆ ಭದ್ರತಾ ಠೇವಣಿ ಸಂಬಂಧ ಮೊತ್ತವನ್ನು ಬ್ಯಾಂಕ್ ಹುಂಡಿ ರೂಪದಲ್ಲಿ ಸಲ್ಲಿಸಬೇಕು ಹಾಗೂ ನಿಗದಿತ ನಮೂನೆಯಲ್ಲಿ ಕರಾರು ಪತ್ರವನ್ನು ರೂ 50/- ಸ್ಟಾಂಪ್ ಕಾಗದದಲ್ಲಿ ಸಹಿ ಮಾಡಿ ನಿಗದಿತ ಅವಧಿಯೊಳಗೆ ಸಲ್ಲಿಸಬೇಕು.

ದರಪಟ್ಟಿಗಳನ್ನು ಸೀಲ್ ಮಾಡಿದ ಲಕೋಟೆಯಲ್ಲಿಟ್ಟು ಅದರ ಮೇಲೆ **'ಚಿಣ್ಣರ ಅಂಗಳ – 3 -- ಅಭ್ಯಾಸ ಪುಸ್ತಕಗಳ ಹಾಗೂ ಬೋಧಕರ ಕೈಪಿಡಿ ಮುದ್ರಣ ಮತ್ತು ವಿತರಣೆಗೆ ಸಂಬಂಧಿಸಿದಂತೆ'.** ಎಂದು ಬರೆದು ಕೆಳಗೆ ಸಹಿ ಮಾಡಿರುವವರಿಗೆ ಸಲ್ಲಿಸತಕ್ಕದ್ದು. ತಡವಾಗಿ ಸಲ್ಲಿಸಿದ ದರ ಪಟ್ಟಿಗಳನ್ನು ಅಂಗಿಕರಿಸುವುದಿಲ್ಲ. ಯಾವುದೇ ಕೊಟೇಶನ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕಛೇರಿಯು ಹೊಂದಿದೆ.

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವ ಶಿಕ್ಷಣ ಅಭಿಯಾನ